doc-371
T-P-2

Reg B G 155 12-9-1966

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ
ಸ್ಥಳದಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಸಂಚೀವೆಚ್ಚ ಸೇರಿ ವರ್ಷಕ್ಕೆ ರೂ 16-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 6

SATYAVADI Daily, MYSORE 4

ಸತ್ಯವಾದಿ

52 nd Year of Publication

ಸ್ಥಾಪಕರು : ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಪಾಂಡಿಚೆರಿ ಕಾಂಗ್ರೆಸ್ ಸರ್ಕಾರದ ರಾಜೀನಾಮೆ

ನಾಟಕ ಸಿನಿಮಾಗಳಿಗೆ ಹೋಗಬಹುದು

ಐರ್ಲಂಡಿನ ವಿಷಯವಿದು. ರೋಮ್ ಕ್ಯಾಥಲಿಕ್ ಗುರುಗಳು ತಮ್ಮ ನೀತಿಮಟ್ಟ ಕಾಪಾಡಿಕೊಳ್ಳಲು ನಾಟಕ ಸಿನಿಮಾಗಳಿಗೆ ಹೋಗುವುದನ್ನು 1866 ರಲ್ಲಿ ಪ್ರತಿಬಂಧಿಸಿ ನಿಬಂಧನೆ ಮಾಡಲಾಗಿತ್ತು. ಈಗ ಆ ಕಟ್ಟಪ್ಪಣೆ ನಿಯಮ ನಂ. 47 ಕೈಗೆದು ಹಾಕಲಾಗಿದೆ. ಆಗ ಪ್ರದರ್ಶನಗಳಿಗೆ ೀ ಶ್ಯೆಯರೂ, ಜೇಬುಗಳ್ಳರೂ ಬರುವುದು ಹೆಚ್ಚಾಗಿತ್ತು.

●

ಗಣಪತಿ ಸತ್ಯಾಗ್ರಹ

ಪಶ್ಚಿಮ ಮಹಾರಾಷ್ಟ್ರದಲ್ಲಿಯು ರಹುರಿ ಯಲ್ಲಿ ವ್ಯವಸಾಯ ಸಶ್ವವಿದ್ಯಾನಿಲಯ ಸ್ಥಾಪನೆ ಮಾಡಲಾಗುವುದೆಂದು ಸರ್ಕಾರ ತೀರ್ಮಾನಿಸುವವರಿಗೆ ಬೊಂಬಾಯಿಯಲ್ಲಿರುವ ಹದಿಮೂರುಸಂಸ್ಥೆಗಳು ತಾವು ಇಟ್ಟು ಪೂಜಿಸಿದ ದೊಡ್ಡ ದೊಡ್ಡ ಗಣಪತಿಗಳನ್ನು ವಿಸರ್ಜನೆ ಮಾಡದಿರುವ ನಿರ್ಧಾರವನ್ನು ಮಾಡಿವೆ.

ಚಿಕ್ಕ ಪಾಕೀಸ್ತಾನ್

ಪಾಲಘಾಟ್ ಮತ್ತು ಕಲ್ಲಿಕೋಟೆಯ ಕೆಲವು ಭಾಗಗಳನ್ನು ಸೇರಿಸಿ ಮಾಲಾಪುರಂ ಜಿಲ್ಲೆಯಾಗಿ ರಚಿಸಲಾಗುವುದು. ಇದು ಕೇರಳದ ಹತ್ತನೇ ಜಿಲ್ಲೆ. ಇದನ್ನು ಮಾಪ್ಪಳ್ಳ ಸ್ಥಾನ್ ಅಥವಾ ಚಿಕ್ಕ ಪಾಕೀಸ್ತಾನ್ ಎಂದು ಟೀಕೆಗಾರರು ಸಂಬೋಧಿಸುತ್ತಿರುವರು.

★

ಸತ್ತ ಪಾರ್ಕ್

ಹದಿನೆಂಟು ಅಡಿಗಳ ಉದ್ದದ ಸತ್ತ ಪಾರ್ಕ್ ಒಂದು ಸಮುದ್ರ ತೀರದಲ್ಲಿ ತೇಲಿ ಬಂದು ಬಿದ್ದಿತೆಂದು ಬೊಂಬಾಯಿ ವಾರ್ತೆ.

○ ಮುಂದಿನ ಕಾಂಗ್ರೆಸ್ ಅಧಿವೇಶನ ಹರಿಯಾನಾದಲ್ಲಿ ಸಮಾವೇಶವಾಗುವದು.

○ ನಾಲ್ಕನೆಯ ಯೋಜನೆಯ ಅವಧಿಯಲ್ಲಿ ಈಗ ಇರುವ ಅಂಚೆ ಕಚೇರಿಗಳ ಸಂಖ್ಯೆ ಎರಡರಷ್ಟಾಗುವವು.

ಸಹಕಾರ ಅಪೇಕ್ಷೆ

ಈ ತಿಂಗಳು 19 ನೇ ತಾ॥ ಅಂಚೆ ಪಿತೃವರ ಮುಷ್ಕರ ನಡೆಯುವದಿದ್ದು, ಈ ಸಂದರ್ಭದಲ್ಲಿ ರಾಜ್ಯ ಸರ್ಕಾರಗಳು ಸಹಕರಿಸಬೇಕೆಂದು ಕೇಂದ್ರ ಸರ್ಕಾರ ಕೇಳಿರುವುದಾಗಿ ತಿಳಿದುಬಂದಿದೆ.

●

ನಿಷೇಧ ಆಜ್ಞೆ

ತಿರುಪಟೂರಿನಲ್ಲಿ ವಿದ್ಯಾರ್ಥಿಗಳ ಗಲಭೆ ಸಂಬಂಧಪಟ್ಟಂತೆ ಮೊನ್ನೆಯಿಂದ 7 ದಿನಗಳ ವರೆಗೆ ಕ್ರಿ. ಪ್ರೊ. 144 ವಿಧಿಯಂತೆ ಒಂದು ವಾರ ನಿಷೇಧಾಜ್ಞೆ ಜಾರಿ ಆಗಿದೆ.

● ಕಡೆಯ ಪಕ್ಷ ಅನೇಕ ಸಂದರ್ಭಗಳಲ್ಲಿ ಕರಿ ಹಣವನ್ನು ಬಿಳಿ ಹಣ ಮಾಡಲು ಕಲ್ಯಾಣ ಭವನಗಳನ್ನು ನಿರ್ಮಾಣ ಮಾಡಲಾಗುವದೆಂದು ಮಾಜಿ ಮಂತ್ರಿ ಶ್ರೀ ಡಿ. ದೇವರಾಜ ಅರಸರು ವಿಧಾನ ಸಭೆಯಲ್ಲಿ ತಿಳಿಸಿದರು.

○ ಈ ತಿಂಗಳು 19 ರಂದು ಸೂಚಿತವಾಗಿರುವ ಕೇಂದ್ರ ನೌಕರರ ಸಾಂಕೇತಿಕ ಮುಷ್ಕರಕ್ಕೆ ಸಂಬಂಧಿಸಿದಂತೆ ನೌಕರರ ನಾಯಕರು ಈ ದಿನ ದೆಹಲಿಯಲ್ಲಿ ಗೃಹ ಮಂತ್ರಿ ಶ್ರೀ ಚವಾಣರನ್ನು ಭೇಟಿಮಾಡುವರು.

○ ಕಲ್ಕತ್ತೆಯ 8 ಆಹೋಪಗಳ ಮೇಲೆ ಬೆಂಗಳೂರಿನ ರಾಜು ಎಂಬವನು ಮೈಸೂರಿನಲ್ಲಿ ಬಂಧಿತನಾದನು.

○ ನಿವೃತ್ತ ಸೈನ್ಯೋಗಿಯೊಬ್ಬ ರಾಜಗೋಪಾಲ ಎಂಬಾತ ಎಸ್. ಕೆ. ಆರ್. ಅಪ್ಪರ್ ಎಲ್ಲಿ ಮರಣಹೊಂದಿದನು. ನೌಕರಿ ಪಡೆಯಲು ಸಾಧ್ಯವಾಗದೆ ಆತ ಫಾಲಿಡಾಲ್ ಸೇವಿಸಿದನೆಂದು ಹೇಳಲಾಗಿದೆ.

○ ಗುಜರಾತು ರಾಜ್ಯ ಸರ್ಕಾರ ಬಟ್ಟೆ ತಯಾರಿಕೆ ಸಂಸ್ಥೆ ಸ್ಥಾಪಿಸಲಿದೆ.

ಪಾಂಡಿಚೆರಿಯಲ್ಲಿ ಗವರ್ನರ್ ಶ್ರೀ ಎಸ್. ಎಂ. ಶ್ರೀನಿವಾಸರವರಿಗೆ ಅಲ್ಲಿನ ಮುಖ್ಯ ಮಂತ್ರಿ ಶ್ರೀ ವಿ. ವೆಂಕಟಸುಬ್ಬ ರೆಡ್ಡಿಯಾರವರು ನಿನ್ನೆ ರಾಜೀನಾಮೆ ಅರ್ಪಿಸಿದರು. ವಿರೋಧ ಪಕ್ಷದ ನಾಯಕ ಶ್ರೀ ಫರೂಕ್ ಮಾರಿಕಾರ್‌ರವರು ಮಂತ್ರಿಮಂಡಲ ರಚಿಸಲು ತಮ್ಮನ್ನು ಆಹ್ವಾನಿಸುವಂತೆ ಕೋರಿದ್ದಾರೆ.

★

ಮುಷ್ಕರ

ಆರು ವಿಷಯಗಳಲ್ಲಿ ಉತ್ತೀರ್ಣರಾದರೂ ನಾಲ್ಕನೇ ವರ್ಷದ ಇಂಜಿನೀಯರಿಂಗ್ ವಿದ್ಯಾರ್ಥಿಗಳನ್ನು ಮುಂದಿನ ತರಗತಿಗೆ ಕಳಿಸಬೇಕೆಂಬಬೇಡಿಕೆಯನ್ನು ಮುಂದಿಟ್ಟು ಮೈಸೂರು ವಿಶ್ವವಿದ್ಯಾನಿಲಯದ ಇಂಜಿನಿಯರಿಂಗು ವಿದ್ಯಾರ್ಥಿಗಳು ಇಂದಿನಿಂದ ಮುಷ್ಕರ ಹೂಡಲು ನಿರ್ಧರಿಸಿದ್ದಾರೆ.

★ ವಿದ್ಯಾರ್ಥಿಗಳ ಮುಷ್ಕರದಿಂದ ಚಿತ್ರದುರ್ಗದ ಕಾಲೇಜು ಬಂದಾಗಿದೆ.

○ ರಾಜ್ಯದಲ್ಲಿ ಸಂಯುಕ್ತ ವಿಧಾಯಕ ದಳ ಸರ್ಕಾರದ ವಿರುದ್ಧ ತಾವು ಸಾಮೂಹಿಕ ಸಹಕಾರ್ಯಕ್ರಮ ಆರಂಭಿಸುವದಾಗಿಯು, ಅದನ್ನು ರಾಷ್ಟ್ರಪತಿಯವರಿಗೆ ಒಪ್ಪಿಸುವುದಾಗಿಯೂ ಮಧ್ಯ ಪ್ರದೇಶದ ಶಾಸನ ಸಭೆ ನಾಯಕ ಶ್ರೀ ಡಿ. ಪಿ. ಮಿಶ್ರ ಭೂಪಾಲನಲ್ಲಿ ತಿಳಿಸಿದರು.

ನೀವು ನಾಲ್ಕು ಅಂಗಡಿ ಸುತ್ತುವುದೂ ಒಂದೇ ನೆಟ್ಟಗೆ ಬ್ಯಾಂಕ್ ರೋಡ್ ಬಾಹುಸಾರ್ ಕಂಪನಿಯಲ್ಲಿ ವ್ಯಾಪಾರ ಮಾಡುವುದೂ ಒಂದೇ. ಅವರಲ್ಲಿ ಸಾಫ್-ಸೀದಾ ಒಂದೇ ವ್ಯಾಪಾರ. ಒಂದೇ ಬೆಲೆ ಮತ್ತು ನ್ಯಾಯವಾದ ಬೆಲೆ. ಚೌಕಸಿ ಇಲ್ಲ ಹೆಚ್ಚು ಹೇಳುವುದೂ ಇಲ್ಲ ಕಡಿಮೆ ಕೊಡುವುದೂ ಇಲ್ಲ. ಒಟ್ಟಿನ ಮೇಲೆ ತಲೆನೋವು ಇಲ್ಲದ ವ್ಯಾಪಾರ. ಅಷ್ಟೆ.

ಕೇರಳ, ಮದ್ರಾಸ್ ಸರ್ಕಾರಗಳ ಲಕ್ಕಿ ಟಿಕೆಟ್‌ಗಳು

ಕೇರಳ ಸರ್ಕಾರದ ಲಾಟರಿ : ಮೊದಲನೆ ಬಹುಮಾನ ರೂ. 100,000
ಮತ್ತು ಇತರ ನೂರಾರು ಬಹುಮಾನಗಳು ! ಡ್ರಾ : 3-11-68.
ಒಂದು ಟಿಕೆಟ್‌ಗೆ ರೂ. 1-75 ಪೈಸೆ.

ಮದ್ರಾಸ್ ಸರ್ಕಾರದ ಲಾಟರಿ : ಮೊದಲನೆ ಬಹುಮಾನ ರೂ. 100,000
ಮತ್ತು ಇತರ ನೂರಾರು ಬಹುಮಾನಗಳು ! ಡ್ರಾ : 14-10-68.
ಒಂದು ಟಿಕೆಟ್‌ಗೆ ರೂ. 1-75 ಪೈಸೆ.

ಪರವನ್ನು ಕೂಡಲೇ ಕಳುಹಿಸಿ. ಮನಿ ಆರ್ಡರ್ ಕೆಳಗೆ ವಿಳಾಸ ಮಾತ್ರ ಬರೆಯಿರಿ. Manager, Business House, Cochin-2.

ಹಿಂದೂಗಳ ಆಚಾರ

ಸಂಗ್ರಾಹಕರು— 'ಶಾಸ್ತ್ರಧರ್ಮನಿರತ" ಅನಂತನರಸಿಂಹಯ್ಯಂಗಾರ್

(ಮುಂದುವರಿದುದು)

2 ಪ್ರತಿಯೊಬ್ಬ ಹಿಂದುವೂ ಪಂಚೆ ಉಡಬೇಕು. ಹಿಂದುಗಳಲ್ಲಿ ಶುಚಿತ್ವಕ್ಕೆ ಯಾವಾಗಲೂ ಪ್ರಾಶಸ್ತ್ಯ ಕೊಟ್ಟಿರುತ್ತಾರೆ. ಒಗೆಯುವಾಗ ಸ್ವಲ್ಪ ಕ್ಷಾರವೂ ಇಲ್ಲದಂತೆ ಬಿಗಿಯಬಹುದು; ಮತ್ತು ಪ್ರತಿನಿತ್ಯವೂ ಬದಲಾಯಿಸಿ ಉಡಬಹುದು. ಹೊಲಿದ ಬಟ್ಟೆಗಳಲ್ಲಿ ಎಷ್ಟೇ ಚೆನ್ನಾಗಿ ಒಗೆದಿದ್ದರೂ ಹೊಲಿಗೆಗಳಲ್ಲಿರುವ ಜಾಗದಲ್ಲಿ ಕೊಳೆ ಹೋಗಲಾರದು. ಆಲ್ಲದೇ ಹೊಲಿದ ಬಟ್ಟೆಗಳನ್ನು ಪ್ರತಿನಿತ್ಯವೂ ಒಗೆದು ಬದಲಾಯಿಸಿ ಧರಿಸುವುದು ಸಾಧ್ಯವಾಗದೆಂಬುದು ಅನುಭವಸಿದ್ಧವಾಗಿದೆ. ಆಪಕಾರಣ ಕೊನೆಯಪಕ್ಷ ಸಂಧ್ಯಾದಿ ನಿತ್ಯಕರ್ಮಗಳು, ದೇವತಾರ್ಚನೆ, ಪೂಜಾಹೋಮಾದಿಗಳಲ್ಲಿ ನಡೆಸುವ ಹೋಮ ಮುಂತಾದ ಕರ್ಮಗಳನ್ನು, ಭೋಜನ ಮಾಡುವುದನ್ನು ಇತ್ಯಾದಿ ಕಾಲಗಳಲ್ಲಿಯಾದರೂ ಪಂಚೆಯನ್ನು ಧರಿಸಿ ಮಾಡುವುದು ಶ್ರೇಯಸ್ಕರವಾದದ್ದು.

ಶ್ರುತಿ ॥ ಸ್ನಾತಿ । ಅಹತಂ ವಾಸಃ ಪರಿಧತ್ತೆ । ವಾಸಸೋತ್ಮಹತ್ಯೈ ॥

ಶ್ಲೋ ॥ ಈಷದ್ಧೌತಂನವಂಶ್ವೇತಂಸದಶಂಯನ್ನಧಾರಿತಮ್
ಅಹತಂತದ್ವಿಜಾನೀಯಾತ್ಸರ್ವಕರ್ಮಸುಪಾವನಮ್ ॥

ಶ್ಲೋ ॥ ಸದ್ಯೋಪವೀತಿನಾಕಾರ್ಯಂ ಸದ್ಯಾಬದ್ಧಶಿಖೇನ ಚ
ಅಶಿಖೋನುಪವೀತೀಚಯತ್ಕರೋತಿನತತ್ಕೃತಮ್ ॥

ಸ್ನಾನಮಾಡಿ, ಒಗೆದು ಒಣಗಿಸಲ್ಪಟ್ಟ ಪಂಚೆಯನ್ನು ಧರಿಸುವುದರಿಂದ ಪಾಪ ಪರಿಹಾರವಾಗುತ್ತದೆ.

ಬಿಳಿಗಿರುವ, ಶುಭ್ರವಾದ, ಜೆನ್ನಾಗಿ ಒಗೆಯಲ್ಪಟ್ಟ, ಶ್ವೇತವಿಲ್ಲದಂತೆ ಒಣಗಿರುವ ಪಂಚೆಗೆ "ಅಹತಂ" ಎಂದು ತಿಳಿಯತಕ್ಕದ್ದು. ಎಲ್ಲಾ ಕರ್ಮಗಳಲ್ಲೂ ಅದು ಪವಿತ್ರವಾದದ್ದು.

ಯಾವಾಗಲೂ ಹೊದಿಯುವ ಪಂಚೆಯನ್ನು ಉಪವೀತವಂತೆ ಧರಿಸಿ, ಯಾವಾಗಲೂ ಶಿಖೆಯನ್ನು ಗಂಟುಹಾಕಿಕೊಂಡು ಎಲ್ಲಾ ಕೆಲಸವನ್ನೂ ಮಾಡಬೇಕು. ಶಿಖೆ ಇಲ್ಲದವನೂ, ಉಪವೀತವಿಲ್ಲದವನೂ ಯಾವ ಕರ್ಮವನ್ನು ಮಾಡಿದರೂ ಅದು ನಿಷ್ಪ್ರಯೋಜಕವಾಗುತ್ತದೆ.

Help The Gorakshana

ಗೋವಧೆ ಕೂಡಲೆ ನಿಶ್ಶೇಧವಾಗಲಿ

Protect the Cow

ಗೋರಕ್ಷಣೆಯಮತ್ತುಪೋಷಣೆಯಿಂದಯಾ ಕಾರ್ಯಗಳು ಹೆಚ್ಚೆಚ್ಚಾಗಿ ನಡೆಯಲಿ

Cow Slaughter should be banned Immediately

SHAKTI SUDHA

A Superb Tonic

ವುಡ್‌ಲಾಂಡ್ 12-9-68 ರಿಂದ

ವೈಭವ-ಆರಂಭ

ಮನಮೋಹಕ ಹಿಂದಿ ಚಿತ್ರ

ನೀಲ್ ಕಮಲ್ Neel Kamal

ಈಸ್ಟ್‌ಮನ್ ಕಲರ್

....ಮಿಲಿಯಗಟ್ಟಲೆ ರೂಪಾಯಿನ ಆಕರ್ಷಣೀಯ ಹಿಂದಿ ಚಿತ್ರ ....

ತಾರಾಗಣ— ವಹಿದಾ ರಹಿಮಾ, ಮನೂಜ್‌ಕುಮಾರ್, ರಾಜ್‌ಕುಮಾರ್
ಬಾಲ್‌ರಾಜ್ ಸಹಾನಿ, ಲಲಿತಾ ಪವಾರ್, ಡೇನಿಡ್, ಕಿಕಿಕಳಾ, ಮಹಮೂದ್

ಆಪೇರ— ಜನಪ್ರಿಯ 2 ನೇ ವಾರ

ಚಿತ್ತಾಕರ್ಷಕ ಹಿಂದಿ ಚಿತ್ರ

ಬ್ರಹ್ಮಚಾರಿ

ಪ್ರತಿಯೊಬ್ಬರೂ ನೋಡಿ ಆನಂದಿಸತಕ್ಕ ಈಸ್ಟ್‌ಮೆನ್ ಕಲರ್‌ನ ಹಿಂದಿ ಚಿತ್ರ
ಶಮ್ಮಿ ಕಪೂರ್, ರಾಜಶ್ರೀ, ಮನ್ಮೋಜ್ ಪ್ರಾಣ್, ಮಹಮೂದ್

Golden Jubilee of 'Satyavadi'

The golden jubilee of the 'Satyavadi' is to be celebrated very soon

The President, the Prime Minister, H.H. the Maharaja of Mysore, and other personages have extended messages of felicitations and good wishes. Sri Sringeri and Sri Dwaraka Jagadgurujis have favoured blessings and financial aid.

Rajasabha-bhushana Sri F. K. Irani, Sri M. B. Basaviah, Sri Madhav Henoi, Sri Opera Talkies, Padmabhushana Dr. M. C. Modi, Dr. R. S. Nanjunda Swamy (Glasgow) have generously extended donations and best wishes.

It is well known that golden jubilee of newspapers in India is rare and almost unknown in Mysore State. The Prime Minister has expressed that it is no small achievement.

Hearty cooperation, extending of messages and donations and gracing the occasion with presence, are fervently solicited with grateful thanks.

Editor, 'Satyavadi' Chamarajapuram, Mysore 4.

Printing — Neat Binding

Lakshminarasimha Press

Sivarampet, Mysore

ಆಶೋಕ ಏಜೆನ್ಸೀಸ್

ಲಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು

ಎಲ್ಲ ವಿಧ ಆಯುರ್ವೇದ ಔಷಧಗಳನ್ನೂ ಸಿದ್ಧವಾಗಿ ದೊರೆಯುತ್ತವೆ

Edited, Printed & Published by Dharmaprachara Nirata M S Krishna Rao (Proprietor) at the Satyavadi Press Chamarajapuram, Mysore 4